## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬನಹಟ್ಟಿ

ಉಪಸ್ಥಿತರು : ಮಹೇಶ ಚಂದ್ರಕಾಂತ
ಬಿ.ಎ.,ಎಲ್.ಎಲ್.ಎಂ.,
ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳು, ಬನಹಟ್ಟಿ

ಸಿ.ಸಿ. ನಂ. **695/2015**

ಫಿರ್ಯಾದಿ : ಸರಕಾರದ ಪರವಾಗಿ ತೇರದಾಳ ಪೋಲಿಸ ಠಾಣೆ

**ವಿರುದ್ಧ**

ಆರೋಪಿತಳು: ಕಮಲವ್ವಾ ಡೊಂಬರ

**-:ದೋಷಾರೋಪಣೆ :-**

*ಮಹೇಶ ಚಂದ್ರಕಾಂತ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳು, ಬನಹಟ್ಟಿ ಆದ ನಾನು, ಅರೋಪಿತಳಾದ :*

ಆರೋಪಿತಳು :1) ಕಮಲವ್ವಾ ಡೊಂಬರ
ವಯಾಃ 65 ವರ್ಷ, ಉಃ ಮನೆಗೆಲಸ
ಸಾಃ ತೇರದಾಳ ತಾಃ ಜಮಖಂಡಿ

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ತೇರದಾಳ ಪೋಲಿಸ ಠಾಣೆಯ ಹದ್ದಿಯ ಪೈಕಿ ದಿಃ 24.02.2015 ರಂದು 4.30 ಗಂಟೆಯ ಸುಮಾರಿಗೆ ತೇರದಾಳದ ಫಿರ್ಯಾದಿಯ ಮತ್ತು ಆರೋಪಿತಳಾದ ನಿನ್ನ ಮನೆಗಳು ಅಕ್ಕಪಕ್ಕ ಇದ್ದು, ಫಿರ್ಯಾದಿಯ ಅಣ್ಣನ ಮಕ್ಕಳು ಆಟವಾಡುತ್ತಾ ಆರೋಪಿತಳಾದ ನಿನ್ನ ಮನೆ ಕಡೆಗೆ ಹೋದಾಗ ಆರೋಪಿತಳಾದ ನೀನು ಸಣ್ಣ ಹುಡುಗರಿಗೆ ಇಲ್ಲಾಕ ಆಟಾ ಆಡತೀರಿ ರಂಡ್ಯಾರ ಮಕ್ಕಳಾ, ಬೋಸಡ್ಯಾರ ಮಕ್ಕಳಾ, ಬೇರೆ ಜಾಗಾ ಇಲ್ಲೇನು ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡುವಾಗ ಫಿರ್ಯಾದಿದಾರನ ತಾಯಿಯು ತನ್ನ ಮನೆಯ ಮುಂದಿನ ಕಟ್ಟೆಯ ಮೇಲೆ ಕುಳಿತು ಯಾಕ ಹೊಲಸ ಬೈತಿ ನನ್ನ ಮೊಮ್ಮಕ್ಕಳಿಗೆ ಅಂತಾ ಆರೋಪಿತಳಾದ ನಿಮಗೆ ಕೇಳಿದಾಗ ಆರೋಪಿತಳಾದ ನೀನು ಫಿರ್ಯಾದಿಯ ಮೇಲೆ ಸಿಟ್ಟಾಗಿ ಫಿರ್ಯಾದಿಯ ಮನೆಯ ಮುಂದೆ ಆರೋಪಿತಳಾದ ನೀನು ಬಂದು ಕಟ್ಟೆಯ ಮೇಲೆ ಕುಳಿತ ಫಿರ್ಯಾದಿಯ ತಾಯಿಗೆ ನಿಂದೇನ ರಂಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ. ಕಲಂ 504 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಎರಡನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ ಆರೋಪಿತಳಾದ ನೀನು ನಿನ್ನ ಕೈಯಲ್ಲಿಯ ವಡಗಟ್ಟಿಗೆಯಿಂದ ಫಿರ್ಯಾದಿಯ ತಾಯಿಯ ಎರಡು ಕೈಗಳಿಗೆ ಎದೆಗೂ ಹೊಡೆದು ಸಾದಾ ದುಃಖಾಪತ್ ಪಡಿಸಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ. ಕಲಂ 324 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಕಮಲವ್ವ ಡೊಂಬರ

ಮೂರನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ ಆರೋಪಿತಳಾದ ನೀನು ಪಿರ್ಯಾದಿಯ ತಾಯಿಗೆ ಕೈಯಿಂದ ಹೊಡಿಬಡಿ ಮಾಡಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ. ಕಲಂ 323 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಕೊನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ ಆರೋಪಿತಳಾದ ನೀನು ಫಿರ್ಯಾದಿಯ ತಾಯಿಗೆ ನಮ್ಮ ತಂಟೆಗೆ ಬಂದರೆ ನಿನಗೆ ಬಿಡುವುದಿಲ್ಲ ರಂಡಿ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ. ಕಲಂ 506 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಈ ಎಲ್ಲಾ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ (ಅಧಿಕಾರ ವ್ಯಾಪ್ತಿಯಲ್ಲಿ) ಮಾಡಿರುತ್ತೀರಿ. ಈ ಮೇಲ್ಕಂಡ ದೋಷಾರೋಪಣೆಗಳಿಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ?

ಉತ್ತರಃ- —ಹೌದು—

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೊ?

ಉತ್ತರಃ- — [illegible]

ಮೇಲೆ ಹೇಳಲಾದ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ದಿಃ30.01.2021 ರಂದು ಆರೋಪಿತಳಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ ನಂತರ ಅವಳು ನೀಡಿದ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

ಸ್ಥಳಃ ಬನಹಟ್ಟಿ

ದಿನಾಂಕಃ 30.01.2021

ಪ್ರ. ದ. ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ. 8/2/2021